# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 133+164+144 |
| ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)<br>ಶ್ರೀ ಮಧು ಜಿ.ಮಾದೇಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)<br>ಶ್ರೀ ಕೆ.ವಿವೇಕಾನಂದ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 11.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಹಾಗೂ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)</td><td>
<table>
<tr><th>ಕ್ರ. ಸಂ</th><th>ಶಾಲಾ/ ಕಾಲೇಜು</th><th>ಶಾಲಾ/ಕಾಲೇಜು ಗಳ ಸಂಖ್ಯೆ</th><th>ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>01</td><td>ಸರ್ಕಾರಿ ಪ್ರಾಥಮಿಕ ಶಾಲೆ</td><td>41,279.00</td><td>30,28,689.00</td></tr>
<tr><td>02</td><td>ಸರ್ಕಾರಿ ಪ್ರೌಢ ಶಾಲೆ</td><td>4,871.00</td><td>10,45,836.00</td></tr>
<tr><td>03</td><td>ಸರ್ಕಾರಿ ಪದವಿ ಪೂರ್ವ ಕಾಲೇಜು</td><td>1,319.00</td><td>2,72,318.00</td></tr>
<tr><td></td><td>ಒಟ್ಟು</td><td>47,469.00</td><td>43,46,843.00</td></tr>
</table>
(ಜಿಲ್ಲಾವಾರು ಪಟ್ಟಿ ಅನುಬಂಧ-01 ಲಗತ್ತಿಸಿದೆ)
</td></tr>
<tr><td>ಆ)</td><td>ಈ ಶಾಲೆ ಮತ್ತು ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು ಕಾಯಂ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ? ಇಲ್ಲದಿದ್ದಲ್ಲಿ, ಕಾರಣಗಳೇನು?</td><td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸ್ವಚ್ಛತಾಗಾರರ ಹುದ್ದೆಗಳು ಮಂಜೂರಾಗಿರುವುದಿಲ್ಲ.<br><br>ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆಗಾಗಿ ಅನುದಾನ ಮಂಜೂರಾಗುತ್ತಿದ್ದು, ಸದರಿ ಅನುದಾನದಲ್ಲಿ ಸ್ವಚ್ಛತೆಗಾಗಿ ಸಿಬ್ಬಂದಿಗಳನ್ನು ಸ್ಥಳೀಯವಾಗಿ ಶಾಲಾ ಮೇಲುಸ್ತುವಾರಿ ಸಮಿತಿ ವತಿಯಿಂದ ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಮತ್ತು ಸ್ವಚ್ಛತೆಯ ಕೆಲಸವನ್ನು ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸಲು ಖಾಯಂ ಗ್ರೂಪ್-ಡಿ ಗಳನ್ನು ನೇಮಿಸಲಾಗಿದೆ.<br><br>ಖಾಯಂ ಗ್ರೂಪ್-ಡಿ ಗಳಿಲ್ಲದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಮತ್ತು ಸ್ವಚ್ಛತೆಯ ಕೆಲಸವನ್ನು ಹಾಗೂ ಇತರೆ ಕೆಲಸಗಳನ್ನು ನಿರ್ವಹಿಸಲು ಕಾಲೇಜು ಅಭಿವೃದ್ಧಿ ಸಮಿತಿಯ ವತಿಯಿಂದ ಗೌರವಧನ ಆಧಾರದ ಮೇಲೆ ಗ್ರೂಪ್-ಡಿ ಸಿಬ್ಬಂದಿಯ ಸೇವೆಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.</td></tr>
</table>

ಇ) ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ವಹಣೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು: (ವಿವರ ಒದಗಿಸುವುದು)

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ವಲಯ ಯೋಜನೆಯಡಿ ಶೌಚಾಲಯ ನಿರ್ವಹಣೆಗೆ ಕೆಳಕಂಡಂತೆ ನಿರ್ವಹಣಾ ಅನುದಾನ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ | ವರ್ಷ | ಮಂಜೂರಾದ ಅನುದಾನ (ರೂ. ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2022-23 | **3,495.52** | **3,495.52** |
| 2 | 2023-24 | **12,033.00** | **7,122.00** |
| 3 | 2024-25 | **5,798.31** | **5,798.31** |
| 4 | 2025-26 | **5,329.00** | - |
| | ಒಟ್ಟು | **26,655.83** | **16,415.83** |

ಸರ್ಕಾರಿ ಶಾಲೆಗಳ ನಿರ್ವಹಣೆಗೆ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಶಾಲಾನುದಾನ ಕಾರ್ಯಕ್ರಮದಡಿ ಈ ಕೆಳಗಿನ ಘಟಕ ವೆಚ್ಚದಂತೆ (ವಾರ್ಷಿಕವಾಗಿ) ಶಾಲಾನುದಾನ ಬಿಡುಗಡೆಗೊಳಿಸಲಾಗುತ್ತಿದೆ.

| ಕ್ರ. ಸಂ | ವಿದ್ಯಾರ್ಥಿಗಳ ಸಂಖ್ಯೆ | ಘಟಕ ವೆಚ್ಚ (ರೂ.ಗಳಲ್ಲಿ) | ಶಾಲೆಗಳ ಸಂಖ್ಯೆ | 2024-25ನೇ ಸಾಲಿಗೆ ಬಿಡುಗಡೆ ಮಾಡಲಾದ ಶಾಲಾನುದಾನ (ರೂ. ಗಳಲ್ಲಿ) |
|---|---|---|---|---|
| 1 | 1 ರಿಂದ 30 ವಿದ್ಯಾರ್ಥಿಗಳಿರುವ ಶಾಲೆಗಳು | 10,000/- | 16,589 | 16,22,86,000.00 |
| 2 | 31 ರಿಂದ 100 ವಿದ್ಯಾರ್ಥಿಗಳಿರುವ ಶಾಲೆಗಳು | 25,000/- | 15,880 | 39,69,20,000.00 |
| 3 | 101 ರಿಂದ 250 ವಿದ್ಯಾರ್ಥಿಗಳಿರುವ ಶಾಲೆಗಳು | 50,000/- | 10,229 | 50,99,70,000.00 |
| 4 | 251 ರಿಂದ 1000 ವಿದ್ಯಾರ್ಥಿಗಳಿರುವ ಶಾಲೆಗಳು | 75,000/- | 4,478 | 33,17,70,000.00 |
| 5 | 1000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು | 1,00,000/- | 135 | 1,34,20,000.00 |
| | ಒಟ್ಟು | | 47,311 | 1,41,43,14,000.00 |

ಅನುದಾನದ ಲಭ್ಯತೆಗನುಗುಣವಾಗಿ ಪ್ರತಿ ವರ್ಷ ಶಾಲಾನುದಾನ ಬಿಡುಗಡೆಗೊಳಿಸಲಾಗುವುದು. ಬಿಡುಗಡೆ ಮಾಡಲಾಗುವ ಶಾಲಾನುದಾನದಲ್ಲಿ ಶೇಕಡಾ 10% ರಷ್ಟು ಅನುದಾನವನ್ನು ಶಾಲಾ ಸ್ವಚ್ಛತೆಗೆ ಬಳಸಲು ನಿಗದಿಪಡಿಸಲಾಗಿದೆ.

ರಾಜ್ಯದಲ್ಲಿರುವ 308 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮಕ್ಕಳ ದಾಖಲಾತಿ ಸಂಖ್ಯೆ ಅನುಗುಣವಾಗಿ 5 ಲಕ್ಷದಿಂದ 9 ಲಕ್ಷಗಳವರಗೆ ಶಾಲಾ ನಿರ್ವಹಣಾ ಅನುದಾನ ಒದಗಿಸಲಾಗುತ್ತಿದ್ದು, ಸದರಿ ಅನುದಾನದಲ್ಲಿ ಶೌಚಾಲಯ ನಿರ್ವಹಣೆಗೆ ರೂ. 20,000/- ರಿಂದ ರೂ. 45,000/- ರವರೆಗೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ 1(ಅ)**ರಲ್ಲಿ ಸಲ್ಲಿಸಿದೆ.

| | | |
|---|---|---|
| ಈ) | ಈ ಪೈಕಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಸಂಖ್ಯೆ ಎಷ್ಟು? (ಜಿಲಾವಾರು – ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು – ಸಂಖ್ಯೆಯ ವಿವರ ನೀಡುವುದು) | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಜಿಲ್ಲಾವಾರು ಅಂಕಿ ಅಂಶವನ್ನು **ಅನುಬಂಧ-02** ರಲ್ಲಿ ಲಗತ್ತಿಸಿದೆ.<br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಳಸಲು ಯೋಗ್ಯವಾಗಿರುವ, ದುರಸ್ತಿ ಆಗಬೇಕಿರುವ ಹಾಗೂ ನೀರಿನ ಸಂಪರ್ಕ ಇರುವ ಅಥವಾ ಇಲ್ಲದಿರುವ ಶೌಚಾಲಯಗಳ ಜಿಲ್ಲಾವಾರು ಕ್ರೂಢೀಕೃತ ಮಾಹಿತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ. |
| ಉ) | ಒಂದು ವೇಳೆ ಖಾಯಂ ಸ್ವಚ್ಛತಾ ಸಿಬ್ಬಂದಿ ಇಲ್ಲದಿದ್ದರೆ, ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ಹೊರಗುತ್ತಿಗೆ ಸಂಸ್ಥೆಗಳ ಮೂಲಕ ನಿರ್ವಹಿಸಲು ಅವಕಾಶ ಮತ್ತು ಅನುದಾನ ಒದಗಿಸುವ ಕುರಿತು ಸರ್ಕಾರದ ನಿಲುವೇನು? | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಸ್ವಚ್ಛತಾಗಾರರ ಸೇವೆ ಪಡೆಯಲು ಹುದ್ದೆ ಮಂಜೂರಾತಿ ಇರುವುದಿಲ್ಲ. ಶಾಲಾ ನಿರ್ವಹಣೆಗೆ ಬಿಡುಗಡೆ ಮಾಡಲಾದ ಅನುದಾನ ಬಳಸಿಕೊಂಡು ಶಾಲಾ ಶೌಚಾಲಯ ಸ್ವಚ್ಛತೆ ಮತ್ತು ಇತರೇ ಸ್ವಚ್ಛತೆ ಕೈಗೊಳ್ಳಲು ಶಾಲಾ ಮುಖ್ಯಶಿಕ್ಷಕರಿಗೆ ಸೂಚಿಸಲಾಗಿದೆ.<br><br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಸ್ವಚ್ಛತೆಯ ಕೆಲಸವನ್ನು ನಿರ್ವಹಿಸಲು, ಖಾಯಂ ಸಿಬ್ಬಂದಿಗಳಿಲ್ಲದ ಕಾಲೇಜು ಅಭಿವೃದ್ಧಿ ಸಮಿತಿಯ ವತಿಯಿಂದ (CDC) ಗೌರವಧನ ಆಧಾರದ ಮೇಲೆ ಗ್ರೂಪ್-ಡಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ. |
| ಊ) | ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು, ಸರ್ಕಾರದ ಗಮನಕ್ಕೆ ಬಂದಿದೆ.<br>ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.<br><br>**<u>ಪ್ರಾಥಮಿಕ ಶಿಕ್ಷಣ</u>**<br>ಬೆಂಗಳೂರು ವ್ಯಾಪ್ತಿಯ ಈ ಕೆಳಕಂಡ ಶಾಲೆಗಳಲ್ಲಿ ಮಕ್ಕಳನ್ನು ಶೌಚಾಲಯ ಕಾರ್ಯಕ್ಕೆ ಬಳಸಿಕೊಂಡಿರುವ ಆರೋಪದ ಕುರಿತು ಈ ಕೆಳಕಂಡ ಶಿಕ್ಷಕರ ವಿರುದ್ಧ ಉಪನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ ಇವರ ಹಂತದಲ್ಲಿ ಶಿಸ್ತು ಕ್ರಮ ಜರುಗಿಸಲಾಗಿರುತ್ತದೆ.<br>1. ಕೆ.ಪಿ.ಎಸ್. ಅತ್ತಿಗುಪ್ಪೆ ಪ್ರಾಥಮಿಕ ಶಾಲೆ, ಬೆಂ.ದ.ವಲಯ -3 ಈ ಶಾಲೆಯ ಮುಖ್ಯ ಶಿಕ್ಷಕರ ವಿರುದ್ಧ ದಿನಾಂಕ:05.05.2025ರಂದು ಅಮಾನತ್ತು ಮಾಡಿದ್ದು ಉಪನಿರ್ದೇಶಕರ ಹಂತದಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೇಗೂರು, ಬೆಂ.ದ.ವ-3 ಈ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಮತ್ತು ದೈಹಿಕ ಶಿಕ್ಷಕರನ್ನು ದಿನಾಂಕ: 22.03.2025ರಂದು ಅಮಾನತ್ತು ಮಾಡಿದ್ದು, ಉಪನಿರ್ದೇಶಕರ ಹಂತದಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| | | <u>**ಪ್ರೌಢ ಶಿಕ್ಷಣ**</u><br>ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಶೌಚಾಲಯ ನಿರ್ವಹಣೆ ಕಾರಣದಿಂದ ಸರ್ಕಾರಿ ಶಾಲಾ ಶಿಕ್ಷಕರ ವಿರುದ್ಧ ಯಾವುದೇ ಪತ್ರ/ ಪ್ರಕರಣ ಸ್ವೀಕೃತವಾಗಿರುವುದಿಲ್ಲ.<br><br>ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಬಗ್ಗೆ ಈಗಾಗಲೇ ದಿನಾಂಕ: 28.12.2023 ಮತ್ತು ದಿನಾಂಕ: 26.03.2025ರಂದು ಸುತ್ತೋಲೆಗಳನ್ನು ಹೊರಡಿಸಲಾಗಿದೆ. **(ಅನುಬಂಧ-4.)** |
| ಋ) | ಕರ್ನಾಟಕದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸುಧಾರಣೆಗಾಗಿ ಖಾಯಂ ಆಗಿರುವ ಶಾಸನಾತ್ಮಕ ಸ್ವಾಯತ್ತ ಆಯೋಗವನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? | ಈ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಇಪಿ 200ಯೋಸಕ 2025**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

Starred Question-164 Starred Question No: 164_ (1)

ಅನುಬಂಧ - 1

## Annexure-01

### *2024-25 District level- PrimarySchool Enrollment (SATS-2024-25)*

| *Sl no* | *District* | *School Category* | *Total No of Enrollment* |
|---|---|---|---|
| 1 | 2 | 3 | 4 |
| 1 | BAGALKOT | PRIMARY | 129566 |
| 2 | BALLARI | PRIMARY | 83684 |
| 3 | BELAGAVI | PRIMARY | 152043 |
| 4 | BELAGAVI CHIKKODI | PRIMARY | 174811 |
| 5 | BENGALURU RURAL | PRIMARY | 42329 |
| 6 | BENGALURU U NORTH | PRIMARY | 68904 |
| 7 | BENGALURU U SOUTH | PRIMARY | 107959 |
| 8 | BIDAR | PRIMARY | 85503 |
| 9 | CHAMARAJANAGARA | PRIMARY | 41278 |
| 10 | CHIKKABALLAPURA | PRIMARY | 48143 |
| 11 | CHIKKAMANGALURU | PRIMARY | 43392 |
| 12 | CHITRADURGA | PRIMARY | 93478 |
| 13 | DAKSHINA KANNADA | PRIMARY | 71262 |
| 14 | DAVANAGERE | PRIMARY | 71420 |
| 15 | DHARWAD | PRIMARY | 102517 |
| 16 | GADAG | PRIMARY | 69564 |
| 17 | HASSAN | PRIMARY | 57419 |
| 18 | HAVERI | PRIMARY | 110170 |
| 19 | KALBURGI | PRIMARY | 173178 |
| 20 | KODAGU | PRIMARY | 15828 |
| 21 | KOLAR | PRIMARY | 57751 |
| 22 | KOPPAL | PRIMARY | 129495 |
| 23 | MANDYA | PRIMARY | 52724 |
| 24 | MYSURU | PRIMARY | 96751 |
| 25 | RAICHUR | PRIMARY | 166650 |
| 26 | RAMANAGARA | PRIMARY | 38856 |
| 27 | SHIVAMOGGA | PRIMARY | 80120 |
| 28 | TUMAKURU | PRIMARY | 66168 |
| 29 | TUMAKURU MADHUGIRI | PRIMARY | 49507 |
| 30 | UDUPI | PRIMARY | 40452 |
| 31 | UTTARA KANNADA | PRIMARY | 36887 |
| 32 | UTTARA KANNADA SIRSI | PRIMARY | 52476 |
| 33 | VIJAYANAGARA | PRIMARY | 105641 |
| 34 | VIJAYAPURA | PRIMARY | 195633 |
| 35 | YADAGIRI | PRIMARY | 117130 |
| **TOTAL** | | | **3028689** |

## Annexure-[redacted]

### 2024-25 District level- High School Enrollment
### (SATS-2024-25)

| *Sl no* | *District* | *School Category* | *Total No of Enrollment* |
|---|---|---|---|
| 1 | 2 | 3 | 4 |
| 1 | BAGALKOT | HIGH SCHOOL | 58706 |
| 2 | BALLARI | HIGH SCHOOL | 44581 |
| 3 | BELAGAVI | HIGH SCHOOL | 35409 |
| 4 | BELAGAVI CHIKKODI | HIGH SCHOOL | 64443 |
| 5 | BENGALURU RURAL | HIGH SCHOOL | 12454 |
| 6 | BENGALURU U NORTH | HIGH SCHOOL | 21203 |
| 7 | BENGALURU U SOUTH | HIGH SCHOOL | 27424 |
| 8 | BIDAR | HIGH SCHOOL | 24618 |
| 9 | CHAMARAJANAGARA | HIGH SCHOOL | 13800 |
| 10 | CHIKKABALLAPURA | HIGH SCHOOL | 16539 |
| 11 | CHIKKAMANGALURU | HIGH SCHOOL | 14055 |
| 12 | CHITRADURGA | HIGH SCHOOL | 19866 |
| 13 | DAKSHINA KANNADA | HIGH SCHOOL | 25091 |
| 14 | DAVANAGERE | HIGH SCHOOL | 21910 |
| 15 | DHARWAD | HIGH SCHOOL | 28692 |
| 16 | GADAG | HIGH SCHOOL | 27277 |
| 17 | HASSAN | HIGH SCHOOL | 21798 |
| 18 | HAVERI | HIGH SCHOOL | 33100 |
| 19 | KALBURGI | HIGH SCHOOL | 61046 |
| 20 | KODAGU | HIGH SCHOOL | 4266 |
| 21 | KOLAR | HIGH SCHOOL | 18955 |
| 22 | KOPPAL | HIGH SCHOOL | 58506 |
| 23 | MANDYA | HIGH SCHOOL | 22248 |
| 24 | MYSURU | HIGH SCHOOL | 42471 |
| 25 | RAICHUR | HIGH SCHOOL | 83573 |
| 26 | RAMANAGARA | HIGH SCHOOL | 12865 |
| 27 | SHIVAMOGGA | HIGH SCHOOL | 28121 |
| 28 | TUMAKURU | HIGH SCHOOL | 17603 |
| 29 | TUMAKURU MADHUGIRI | HIGH SCHOOL | 13511 |
| 30 | UDUPI | HIGH SCHOOL | 17947 |
| 31 | UTTARA KANNADA | HIGH SCHOOL | 7754 |
| 32 | UTTARA KANNADA SIRSI | HIGH SCHOOL | 15840 |
| 33 | VIJAYANAGARA | HIGH SCHOOL | 37174 |
| 34 | VIJAYAPURA | HIGH SCHOOL | 48206 |
| 35 | YADAGIRI | HIGH SCHOOL | 44784 |
| | **TOTAL** | | **1045836** |

Student Achievement Tracking System,Karnataka.

# GOVERNMENT PU COLLEGE STRENGTH REPORT

Academic Year:2025-2026

| Sr No | DISTRICTCODE | DISTRICTNAME | IPUC | IIPUC | TOTAL |
|---|---|---|---|---|---|
| 1 | AN | BENGALURU NORTH | 3755 | 4681 | 8436 |
| 2 | AS | BENGALURU SOUTH | 3199 | 3556 | 6755 |
| 3 | BB | BENGALURU RURAL | 1483 | 1833 | 3316 |
| 4 | BR | RAMNAGARA | 2440 | 2630 | 5070 |
| 5 | CC | BELLARY | 8016 | 7436 | 15452 |
| 6 | DC | CHIKKODI | 4806 | 4801 | 9607 |
| 7 | DD | BELAGAVI | 5328 | 4479 | 9807 |
| 8 | EB | BAGALKOTE | 6575 | 6296 | 12871 |
| 9 | EE | VIJAYAPUR | 4280 | 5090 | 9370 |
| 10 | FF | BIDAR | 1226 | 1529 | 2755 |
| 11 | GD | DAVANAGERE | 3595 | 4230 | 7825 |
| 12 | GG | CHITRADURGA | 3841 | 4208 | 8049 |
| 13 | HH | CHICKAMAGALUR | 3810 | 3915 | 7725 |
| 14 | JG | GADAG | 3375 | 2739 | 6114 |
| 15 | JH | HAVERI | 3535 | 3537 | 7072 |
| 16 | JJ | DHARWAD | 2729 | 2455 | 5184 |
| 17 | KK | KALBURGI | 2793 | 4425 | 7218 |
| 18 | KY | YADGIR | 2402 | 3288 | 5690 |
| 19 | LL | HASSAN | 5065 | 4997 | 10062 |
| 20 | MC | CHIKKABALLAPUR | 1267 | 1431 | 2698 |
| 21 | MM | KOLAR | 3143 | 3269 | 6412 |
| 22 | NC | CHAMARAJANAGAR | 2643 | 2619 | 5262 |
| 23 | NN | MYSURU | 9506 | 10878 | 20384 |
| 24 | PP | MANDYA | 3219 | 3706 | 6925 |
| 25 | QQ | UTTARA KANNADA | 6301 | 6190 | 12491 |
| 26 | RK | KOPPAL | 5521 | 4933 | 10454 |
| 27 | RR | RAICHUR | 4026 | 3967 | 7993 |
| 28 | SS | DAKSHIN KANNADA | 6216 | 5741 | 11957 |
| 29 | SU | UDUPI | 4226 | 4337 | 8563 |
| 30 | TT | SHIMOGA | 7750 | 7897 | 15647 |
| 31 | UU | TUMKUR | 5736 | 7047 | 12783 |
| 32 | VV | KODAGU | 1161 | 1210 | 2371 |
| | | TOTAL | 132968 | 139350 | 272318 |

| DISTRICTWISE MANAGEMENTWISE GOVERNMENT PU COLLEGES COUNT | | |
|---|---|---|
| Sl.No | District | Government Clg Count |
| 1 | BAGALKOTE | 47 |
| 2 | BALLARI | 56 |
| 3 | BELAGAVI | 32 |
| 4 | BENGALURU NORTH | 18 |
| 5 | BENGALURU RURAL | 16 |
| 6 | BENGALURU SOUTH | 20 |
| 7 | BIDAR | 28 |
| 8 | CHAMARAJANAGARA | 28 |
| 9 | CHIKKABALLAPURA | 25 |
| 10 | CHIKKAMAGALURU | 39 |
| 11 | CHIKKODI | 33 |
| 12 | CHITRADURGA | 38 |
| 13 | DAKSHINA KANNADA | 55 |
| 14 | DAVANAGERE | 42 |
| 15 | DHARWAD | 31 |
| 16 | GADAG | 29 |
| 17 | HASSAN | 83 |
| 18 | HAVERI | 34 |
| 19 | KALABURAGI | 62 |
| 20 | KODAGU | 14 |
| 21 | KOLAR | 36 |
| 22 | KOPPAL | 50 |
| 23 | MANDYA | 71 |
| 24 | MYSURU | 80 |
| 25 | RAICHUR | 49 |
| 26 | RAMANAGARA | 35 |
| 27 | SHIVAMOGGA | 51 |
| 28 | TUMAKURU | 75 |
| 29 | UDUPI | 43 |
| 30 | UTTARA KANNADA | 37 |
| 31 | VIJAYAPURA | 36 |
| 32 | YADGIRI | 26 |
| TOTAL | | 1319 |

ಅನುಬಂಧ - 1(ಬಿ)

| | | 2025 -26 ನೇ ಸಾಲಿನ 308 ಕೆ.ಪಿ.ಎಸ್. ಶಾಲೆಗಳಿಗೆ ಬಿಡುಗಡೆಯಾದ ವಾರ್ಷಿಕನಿರ್ವಹಣಾ ಅನುದಾನದಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು ಲೆಕ್ಕಶೀರ್ಷಿಕೆ: 2202-01-053-0-02-059,422,423ಒಟ್ಟು ರೂ.1949- ಲಕ್ಷಗಳು | 0-500 Strenght<br>5.00 Lakhs | 501-1000 Strenght<br>6.00 Lakhs | 1001-1500 Strenght<br>7.00 Lakhs | 1501+ Strenght<br>9.00 Lakhs |
|---|---|---|---|---|---|---|
| ಕ್ರ.ಸಂ | ಕಾರ್ಯಕ್ರಮದ ಹೆಸರು | ಅನುಷ್ಠಾನ ಗೊಳಿಸಬೇಕಾದ ಕಾರ್ಯಕ್ರಮದ ವಿವರ | | | | |
| 1 | ಕೆ.ಪಿ.ಎಸ್ ಶಾಲೆಗಳು | 1.ಶೌಚಾಲಯ ನಿರ್ವಹಣೆ | 0.20 | 0.20 | 0.30 | 0.45 |
| | | 2.ವಿಜ್ಞಾನ ಪ್ರಯೋಗಾಲಯ | 0.20 | 0.20 | 0.30 | 0.45 |
| | | 3.ಗ್ರಂಥಾಲಯ | 0.20 | 0.20 | 0.30 | 0.45 |
| | | 4.ಬೋಧನೋಪಕರಣಗಳು | 0.20 | 0.20 | 0.30 | 0.40 |
| | | 5.ಕ್ರೀಡಾ ಸಾಮಗ್ರಿಗಳು | 0.15 | 0.15 | 0.30 | 0.45 |
| | | 6.ಇಂಟರ್ ನೆಟ್ ಸಂಪರ್ಕ | 0.15 | 0.2 | 0.30 | 0.45 |
| | | 7.ಸಿಸಿ ಟಿವಿಅಳವಡಿಕೆ | 0.15 | 0.25 | 0.30 | 0.5 |
| | | 8.ಗೋಡೆಯ ಚಿತ್ರ | 0.10 | 0.15 | 0.20 | 0.45 |
| | | 10.ವಿಜ್ಞಾನಕಲೆ/ ಚಿತ್ರಕಲೆ ಪ್ರದರ್ಶನಗಳು | 0.15 | 0.25 | 0.30 | 0.40 |
| | | 11.ಗಣಕಯಂತ್ರ/ಲ್ಯಾಪ್ ಟಾಪ್ ಗಳು ಮತ್ತು ಪ್ರಿಂಟರ್ ಖರೀದಿ | 0.10 | 0.35 | 0.55 | 1.00 |
| | | 12.ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿರುವ ಅನುದಾನದಲ್ಲಿ, ಪೂರ್ವ ಪ್ರಾಥಮಿಕ (ಯು.ಕೆ.ಜಿ) ಕೊಠಡಿ ಸಜ್ಜುಗೊಳಿಸುವುದು ಮತ್ತು ಅವಶ್ಯಕ ಸಾಧನಾ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು ಹಾಗೂ ಈ ಮೊತ್ತದಲ್ಲಿ 1 ರಿಂದ 1000 ಮಕ್ಕಳ ಸಂಖ್ಯೆ ಇದ್ದಲ್ಲಿ ರೂ.10000/- ರ ಮಿತಿಯಲ್ಲಿ ಹಾಗೂ 1001 ಕ್ಕಿಂತ ಮೇಲ್ಪಟ್ಟು ಮಕ್ಕಳ ಸಂಖ್ಯೆ ಇದ್ದಲ್ಲಿ ರೂ.15000/- ಮಿತಿಯಲ್ಲಿ ಸ್ಥಳೀಯ ಚಿತ್ರಕಲಾ ಶಿಕ್ಷಕರನ್ನು ಬಳಸಿಕೊಂಡು ಕೊಠಡಿ ಅಲಂಕಾರ ಮಾಡುವುದು. | 0.15 | 0.60 | 0.60 | 0.75 |
| | | **ಒಟ್ಟು** | **1.75** | **2.75** | **3.75** | **5.75** |
| | | 13ಪೂರ್ವ ಪ್ರಾಥಮಿಕ ತರಗತಿಗಳ ಅತಿಥಿ ಶಿಕ್ಷಕರಿಗೆ ಹಾಗೂ ಆಯಾಗಳಿಗೆ ವೇತನ :<br>1. ಪೂರ್ವ ಪ್ರಾಥಮಿಕ ತರಗತಿಗಳ ಇಬ್ಬರು ಶಿಕ್ಷಕಿಯರಿಗೆ ಮಾಸಿಕ ವೇತನ ರೂ.10,000/- ರಂತೆ 10 ತಿಂಗಳಿಗೆ ರೂ.2,00,000/-,<br>2. ಒಬ್ಬರು ಆಯಾ ಇದ್ದರೆ ಮಾಸಿಕ ವೇತನ ರೂ.6,250 ರಂತೆ 10 ತಿಂಗಳಿಗೆ ರೂ.62,500/-<br>ಇಬ್ಬರು ಆಯಾಗಳು ಇದ್ದರೆ, ಮಾಸಿಕ ವೇತನ ರೂ6,250- ರಂತೆ 10 ತಿಂಗಳಿಗೆ ರೂ.1,25,000/- ಗಳ ವೆಚ್ಚವನ್ನು ಭರಿಸುವುದು. | 3.25 | 3.25 | 3.25 | 3.25 |
| | | **ಒಟ್ಟು** | **5.00** | **6.00** | **7.00** | **9.00** |

ಅನುಬಂಧ-2.

# Annexure-02

## 2024-25 District level-School Infrastructure Report (SATS 2024-25)

| Sl no | District | No. of Schools Having Toilets | No of schools Having Facility | | | |
|---|---|---|---|---|---|---|
| | | | Boys Toilet | Boys Toilet Units | Girls Toilet | Girls Toilet Units |
| 1 | BAGALKOT | 1424 | 1286 | 1703 | 1368 | 1957 |
| 2 | BALLARI | 704 | 664 | 1022 | 695 | 1189 |
| 3 | BELAGAVI | 1479 | 1379 | 1931 | 1455 | 2211 |
| 4 | BELAGAVI CHIKKODI | 1913 | 1772 | 2642 | 1835 | 3108 |
| 5 | BENGALURU RURAL | 1095 | 1077 | 1625 | 1090 | 1777 |
| 6 | BENGALURU U NORTH | 533 | 522 | 1357 | 529 | 1523 |
| 7 | BENGALURU U SOUTH | 927 | 919 | 2125 | 925 | 2454 |
| 8 | BIDAR | 1344 | 1227 | 1517 | 1284 | 1713 |
| 9 | CHAMARAJANAGARA | 803 | 733 | 1139 | 792 | 1298 |
| 10 | CHIKKABALLAPURA | 1489 | 1424 | 1866 | 1471 | 2142 |
| 11 | CHIKKAMANGALURU | 1372 | 1326 | 1570 | 1348 | 1724 |
| 12 | CHITRADURGA | 1732 | 1701 | 2000 | 1728 | 2109 |
| 13 | DAKSHINA KANNADA | 1062 | 1047 | 1985 | 1059 | 3014 |
| 14 | DAVANAGERE | 1193 | 1163 | 1418 | 1175 | 1551 |
| 15 | DHARWAD | 842 | 736 | 1148 | 799 | 1410 |
| 16 | GADAG | 692 | 617 | 864 | 647 | 962 |
| 17 | HASSAN | 2356 | 2150 | 2611 | 2324 | 2967 |
| 18 | HAVERI | 1278 | 1166 | 1510 | 1205 | 1652 |
| 19 | KALBURGI | 1982 | 1757 | 2354 | 1936 | 2703 |
| 20 | KODAGU | 408 | 404 | 741 | 407 | 897 |
| 21 | KOLAR | 1864 | 1784 | 2224 | 1833 | 2451 |
| 22 | KOPPAL | 1069 | 982 | 1328 | 1037 | 1651 |
| 23 | MANDYA | 1710 | 1654 | 2283 | 1688 | 2493 |
| 24 | MYSURU | 2063 | 2006 | 3007 | 2038 | 3379 |
| 25 | RAICHUR | 1600 | 1553 | 2362 | 1587 | 2591 |
| 26 | RAMANAGARA | 1242 | 1222 | 1685 | 1235 | 1830 |
| 27 | SHIVAMOGGA | 1949 | 1916 | 2433 | 1939 | 2673 |
| 28 | TUMAKURU | 2064 | 1990 | 2349 | 2033 | 2605 |
| 29 | TUMAKURU MADHUGIRI | 1313 | 1291 | 1526 | 1308 | 1686 |
| 30 | UDUPI | 664 | 661 | 1018 | 664 | 1351 |
| 31 | UTTARA KANNADA | 962 | 950 | 1157 | 957 | 1259 |
| 32 | UTTARA KANNADA SIRSI | 1162 | 1137 | 1425 | 1156 | 1589 |
| 33 | VIJAYANAGARA | 1041 | 964 | 1384 | 1027 | 1588 |
| 34 | VIJAYAPURA | 1932 | 1693 | 1987 | 1819 | 2223 |
| 35 | YADAGIRI | 1027 | 882 | 1142 | 1005 | 1425 |
| | **Total** | **46290** | **43755** | **60438** | **45398** | **69155** |

Deputy Director(Planning)

ಅನುಬಂಧ - 3

(5)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) ಮತ್ತು ಶ್ರೀ ಮಧು ಜಿ ಮಾದೇಗೌಡ (ಪದವೀಧರ ಕ್ಷೇತ್ರದಿಂದ ಚುನಾಯಿತರಾದವರು) ಹಾಗೂ ಶ್ರೀ ಕೆ ವಿವೇಕಾನಂದ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ:113+164+144 ಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಬಳಸಲು ಯೋಗ್ಯವಾಗಿರುವ ಶೌಚಾಲಯಗಳ ಸಂಖ್ಯೆ | ದುರಸ್ತಿ ಆಗಬೇಕಿರುವ ಶೌಚಾಲಯಗಳ ಸಂಖ್ಯೆ | ನೀರಿನ ಸಂಪರ್ಕ ಇರುವ ಶೌಚಾಲಯಗಳ ಸಂಖ್ಯೆ | ಪೈಪ್ ಸಂಪರ್ಕ ಇಲ್ಲದೆ ಇತರೆ ಮೂಲದಿಂದ ನೀರನ್ನು ಬಳಸುವ ಶೌಚಾಲಯಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ಉತ್ತರ | 146 | 40 | 175 | 3 |
| 2 | ಬೆಂಗಳೂರು ದಕ್ಷಿಣ | 179 | 25 | 173 | 3 |
| 3 | ಬೆಂಗಳೂರು ಗ್ರಾಮಾಂತರ | 50 | 18 | 58 | 4 |
| 4 | ರಾಮನಗರ | 30 | 0 | 30 | 0 |
| 5 | ಬಳ್ಳಾರಿ | 43 | 9 | 28 | 5 |
| 6 | ವಿಜಯನಗರ | 43 | 9 | 28 | 4 |
| 7 | ಚಿಕ್ಕೋಡಿ | 202 | 28 | 193 | 5 |
| 8 | ಬೆಳಗಾವಿ | 32 | 0 | 32 | 0 |
| 9 | ಬಾಗಲಕೋಟೆ | 38 | 12 | 34 | 4 |
| 10 | ವಿಜಯಪುರ | 64 | 27 | 52 | 3 |
| 11 | ಬೀದರ್ | 59 | 8 | 53 | 3 |
| 12 | ದಾವಣಗೆರೆ | 80 | 2 | 78 | 2 |
| 13 | ಚಿತ್ರದುರ್ಗ | 69 | 19 | 64 | 5 |
| 14 | ಚಿಕ್ಕಮಗಳೂರು | 20 | 19 | 39 | 0 |
| 15 | ಗದಗ | 54 | 10 | 11 | 4 |
| 16 | ಹಾವೇರಿ | 56 | 25 | 56 | 0 |
| 17 | ಧಾರವಾಡ | 55 | 10 | 55 | 0 |
| 18 | ಕಲಬುರ್ಗಿ | 45 | 10 | 49 | 1 |
| 19 | ಯಾದಗಿರಿ | 60 | 7 | 60 | 0 |
| 20 | ಹಾಸನ | 94 | 47 | 94 | 0 |
| 21 | ಚಿಕ್ಕಬಳ್ಳಾಪುರ | 159 | 59 | 157 | 4 |
| 22 | ಕೋಲಾರ | 202 | 66 | 233 | 4 |
| 23 | ಚಾಮರಾಜನಗರ | 174 | 45 | 165 | 5 |
| 24 | ಮೈಸೂರು | 75 | 8 | 75 | 0 |
| 25 | ಮಂಡ್ಯ | 54 | 5 | 54 | 0 |
| 26 | ಉತ್ತರ ಕನ್ನಡ | 37 | 12 | 37 | 0 |
| 27 | ಕೊಪ್ಪಳ | 38 | 35 | 38 | 3 |
| 28 | ರಾಯಚೂರು | 53 | 7 | 38 | 4 |
| 29 | ದಕ್ಷಿಣ ಕನ್ನಡ | 55 | 0 | 0 | 0 |
| 30 | ಉಡುಪಿ | 43 | 0 | 43 | 0 |
| 31 | ಶಿವಮೊಗ್ಗ | 36 | 15 | 33 | 3 |
| 32 | ತುಮಕೂರು | 151 | 30 | 151 | 5 |
| 33 | ಕೊಡಗು | 105 | 31 | 115 | 6 |
| ಒಟ್ಟು | | 2601 | 638 | 2501 | 80 |

ಜಂಟಿ ನಿರ್ದೇಶಕರು
(ಮೂಲಭೂತ ಸೌಲಭ್ಯ ಶಾಖೆ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಷರಾ:

ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನೀರಿನ ಸಂಪರ್ಕವನ್ನು ಸ್ಥಳೀಯವಾಗಿ ಲಭ್ಯವಿರುವ ನಗರಸಭೆ/ ಪುರಸಭೆ ಸಂಪರ್ಕಯಿಂದ ಒದಗಿಸಿಕೊಳ್ಳಲಾಗುತ್ತಿದೆ. ಸದರಿ ವ್ಯವಸ್ಥೆಯಲ್ಲಿ ವ್ಯತ್ಯಯವಾದಲ್ಲಿ ಬೋರ್ ವೆಲ್/ ಟ್ಯಾಂಕರ್ ಗಳ ಮೂಲಕ ನೀರಿನ ಸಂಪರ್ಕ ಕಲ್ಪಿಸಿಕೊಳ್ಳಲು ಪ್ರಾಂಶುಪಾಲರು ಕ್ರಮವಹಿಸಿರುತ್ತಾರೆ.

ಅನುಬಂಧ-4

6

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ:-ಎಡಿಎಂ2(4)ಶೌ.ನಿ/01/2023-24.** **ದಿನಾಂಕ: 28.12.2023.**

**-: ಸುತ್ತೋಲೆ:-**

ವಿಷಯ:-ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಕುರಿತು ಸೂಚನೆಗಳು.

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯೋ8/ಕುನಿಶೌಅಬ/07/2023-24 ದಿನಾಂಕ: 21.09.2023.

*******

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇತ್ತೀಚಿಗೆ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಶೌಚಾಲಯಗಳನ್ನು ವಿದ್ಯಾರ್ಥಿಗಳಿಂದ ಸ್ವಚ್ಛತೆ ಮಾಡಿಸುತ್ತಿರುವ ಕುರಿತಾದ ಘಟನೆಗಳು ಸರ್ಕಾರದ ಮತ್ತು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ, ಸಹ ಪಠ್ಯ ಚಟುವಟಿಕೆಗಳಲ್ಲಿ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಂತಹ ಕಾರ್ಯಗಳಿಂದ ದೂರವಿರಿಸುವುದು ಅಧಿಕಾರಿಗಳ, ಮುಖ್ಯ ಶಿಕ್ಷಕರ, ಶಿಕ್ಷಕರ, ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಆದರೆ ಅವರುಗಳು ಈ ಹೊಣೆಗಾರಿಕೆಯನ್ನು ಮರೆತು ವಿದ್ಯಾರ್ಥಿಗಳನ್ನು ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಆಕ್ಷೇಪಣೀಯ ಮತ್ತು ಖಂಡನೀಯ. ಇಂತಹ ಘಟನೆಗಳನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನಲೆಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಶೌಚಾಲಯಗಳ ಸ್ವಚ್ಛತೆಯನ್ನು ನಿರ್ವಹಿಸುವ ಕುರಿತು ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸಂಬಂಧಿಸಿದ ಎಲ್ಲರಿಗೂ ತಿಳಿಸಲಾಗಿದೆ.

1. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯಗಳ ಸ್ವಚ್ಛತಾ ಕಾರ್ಯ ಮತ್ತು ನಿರ್ವಹಣೆಯನ್ನು ಯಾವುದೇ ಕಾರಣಕ್ಕೂ, ಯಾವುದೇ ಸಂದರ್ಭದಲ್ಲಿಯೂ ಸಹ ವಿದ್ಯಾರ್ಥಿಗಳಿಂದ ಕೈಗೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
2. ಉಲ್ಲೇಖಿತ ಸುತ್ತೋಲೆಯ ಅನುಸಾರ ಶಾಲಾ ನಿರ್ವಹಣಾ ಅನುದಾನವನ್ನು ಆಯಾ ಸರ್ಕಾರಿ ಶಾಲೆಗಳಿಗೆ ಪ್ರಸ್ತುತ ಸಾಲಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನವನ್ನು ಪ್ರಥಮ ಪ್ರಾಶಸ್ತ್ಯದಲ್ಲಿ ಶೌಚಾಲಯಗಳ ಸ್ವಚ್ಛತಾ ಕಾರ್ಯಗಳಿಗೆ ಬಳಸಿಕೊಂಡು ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ಗಳ ಸಹಕಾರದೊಂದಿಗೆ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಶೌಚಾಲಯಗಳ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳತಕ್ಕದ್ದು.
3. ಒಂದು ವೇಳೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಸಿಬ್ಬಂದಿಗಳಾಗಲಿ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಗಾಗಿ ಬಳಸಿಕೊಂಡಲ್ಲಿ ಅಂತಹವರ ಮೇಲೆ ಇಲಾಖಾ ವತಿಯಿಂದ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಹಾಗೂ ಪ್ರಥಮ ವರ್ತಮಾನ ವರದಿ (FIR) ದಾಖಲಿಸಲಾಗುವುದು ಎಂದು ಎಚ್ಚರಿಸಲಾಗಿದೆ.
4. ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ)ಗಳು ವಿದ್ಯಾರ್ಥಿಗಳಿಗೆ ಈ ಕುರಿತು ಅರಿವು ಮೂಡಿಸತಕ್ಕದ್ದು ಹಾಗೂ ಯಾವುದೇ ವಿದ್ಯಾರ್ಥಿಗಳು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬಹುದಾಗಿರುತ್ತದೆ.

5. ಶಾಲೆಗಳಿಗೆ ಕಾಲ-ಕಾಲಕ್ಕೆ ತುರ್ತು ಭೇಟಿ ನೀಡಿ ಶಾಲೆಗಳಲ್ಲಿ ಸ್ವಚ್ಛ ಕುಡಿಯುವ ನೀರು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಬಳಕೆಗೆ ಯೋಗ್ಯವಾದ ಶೌಚಾಲಯಗಳು ಲಭ್ಯವಿರುವುದನ್ನು, ಶುಚಿತ್ವ ಮತ್ತು ನೀರಿನ ಲಭ್ಯತೆಯನ್ನು, ಹಾಗೂ ಶೌಚಾಲಯಗಳಿಗೆ ಬೀಗ ಹಾಕದೇ ವಿದ್ಯಾರ್ಥಿಗಳ ಉಪಯೋಗಕ್ಕೆ ಅವಕಾಶ ಕಲ್ಪಿಸಿರುವುದನ್ನು, ಹಾಗೂ ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳದಿರುವುದನ್ನು ಎಂಬ ಅಂಶಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವಂತೆ ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

6. ಶಾಲೆಯ ಸಂದರ್ಶನದ ವೇಳೆಯಲ್ಲಿ ಒಂದು ವೇಳೆ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವುದು ಗಮನಕ್ಕೆ ಬಂದಲ್ಲಿ, ಅದಕ್ಕೆ ಕಾರಣರಾದವರ ಮೇಲೆ ಮೇಲ್ಕಂಡಂತೆ ತತ್‌ಕ್ಷಣವೇ ಕ್ರಮವಹಿಸಲು ಅನುವಾಗುವಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರು (ಆಡಳಿತ)ರವರಿಗೆ ತಕ್ಷಣ ವರದಿ ಮಾಡಲು ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತಿಳಿಸಿದೆ.

7. ಅದರಂತೆ ಇಂತಹ ಪ್ರಕರಣಗಳಲ್ಲಿ ತತ್‌ಕ್ಷಣವೇ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ)ರವರು ಮೇಲೆ ತಿಳಿಸಿರುವಂತೆ ಸಂಬಂಧಿಸಿದವರ ಮೇಲೆ ಜರೂರಾಗಿ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ಅಥವಾ ನಿರ್ಲಕ್ಷ್ಯತನ ತೋರಿದಲ್ಲಿ ಮತ್ತು ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಅದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು(ಆಡಳಿತ) ರವರನ್ನೇ ನೇರ ಹೊಣೆಗಾರರನ್ನಾಗಿಸಿ ಇಲಾಖೆ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

8. ಇದೇ ರೀತಿ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿಯೂ ಸಹ ಇಂತಹ ಯಾವುದೇ ಪ್ರಕರಣಗಳು ಜರುಗದಂತೆ ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗಳು ಹಾಗೂ ಶಾಲಾ ಮುಖ್ಯಸ್ಥರು ಎಚ್ಚರಿಕೆ ವಹಿಸಲು ತಿಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಹಾಗೂ ಈ ಕುರಿತು ಸರ್ಕಾರದಿಂದ ಮತ್ತು ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಲು ಹಾಗೂ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುವಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ವಹಿಸುವಂತೆ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮತ್ತು ಸಂಬಂಧಿಸಿದ ಎಲ್ಲಾ ಇಲಾಖಾಧಿಕಾರಿಗಳಿಗೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಬಿ.ಬಿ. ಕಾವೇರಿ., ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕ ವೃಂದದ ಅಧಿಕಾರಿಗಳಿಗೆ / ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ.

# ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಎಡಿಎಂ-2(4) ಶಾ.ನಿ/1/2024-25

ದಿನಾಂಕ: 26-03-2025

**-: ಸುತ್ತೋಲೆ:-** **ಅತ್ಯಂತ ತುರ್ತು**

**ವಿಷಯ:** ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಬಳಸದಿರುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಎಡಿಎಂ2(4)ಶಾ.ನಿ/01/2024-25 ದಿನಾಂಕ:28.12.2023

*******

ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆಯನ್ನು ಕಡ್ಡಾಯವಾಗಿ ಮಾಡಿಸಬಾರದೆಂದು ಸಂಬಂಧಿಸಿದ ಶಾಲಾ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಮುಖ್ಯ ಶಿಕ್ಷಕರುಗಳಿಗೆ ಈಗಾಗಲೇ ಉಲ್ಲೇಖಿತ ಸುತ್ತೋಲೆಯ ಮೂಲಕ ತಿಳಿಸಲಾಗಿದ್ದರೂ ಸಹ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುತ್ತಿರುವ ಬಗ್ಗೆ ಇತ್ತೀಚೆಗೆ ಕೆಲವು ಪ್ರಕರಣಗಳು ಬೆಳಕಿಗೆ ಬಂದಿರುವುದನ್ನು ಇಲಾಖೆಯು ಗಮನಿಸಿದೆ.

ಸರ್ಕಾರದಿಂದ ಮತ್ತು ಇಲಾಖೆಯಿಂದ ಕಾಲ-ಕಾಲಕ್ಕೆ ಹೊರಡಿಸಲಾಗುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಸೂಚನೆಗಳನ್ನು ನೀಡಲಾಗುತ್ತಿದ್ದರೂ ಸಹ ಇಂತಹ ಸೂಚನೆಗಳನ್ನು ಉಲ್ಲಂಘಿಸುತ್ತಿರುವುದು ಗಂಭೀರವಾಗಿ ಪರಿಗಣಿಸಿ, ಆಕ್ಷೇಪಿಸಿದೆ.

ಈ ಹಿನ್ನಲೆಯಲ್ಲಿ ಮತ್ತ ಇಂತಹ ಘಟನೆಗಳು ಮರುಕಳಿಸಿದ್ದಲ್ಲಿ ಅಂತವರ ವಿರುದ್ಧ ಇಲಾಖಾ ವತಿಯಿಂದ ನಿಯಮಾನುಸಾರ ಕಠಿಣ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಅಲ್ಲದೆ ಪ್ರಥಮ ವರ್ತಮಾನ ವರದಿ (FIR) ದಾಖಲಿಸಲಾಗುವುದು ಮತ್ತು ಸಂಬಂಧಿಸಿದ ಶಾಲಾ ಶಿಕ್ಷಣ ಇಲಾಖಾಧಿಕಾರಿಗಳು ಮತ್ತು ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಮುಖ್ಯ ಶಿಕ್ಷಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು.

ಉಲ್ಲೇಖಿತ ಪತ್ರದಲ್ಲಿ ಶೌಚಾಲಯ ಸ್ವಚ್ಛತೆಯನ್ನು ನಿರ್ಹಿಸುವ ಕುರಿತು ತಿಳಿಸಿರುವ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಮತ್ತೊಮ್ಮೆ ಎಚ್ಚರಿಸಲಾಗಿದೆ.

ಆಯುಕ್ತರು
**ಶಾಲಾ ಶಿಕ್ಷಣ ಇಲಾಖೆ**

**ಇವರಿಗೆ,**

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು.
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕ ವೃಂದದ ಅಧಿಕಾರಿಗಳಿಗೆ / ಎಲ್ಲಾ ಜಿಲ್ಲಾ ನೋಡೆಲ್ ಅಧಿಕಾರಿಗಳಿಗೆ.
4. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಹ ನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
6. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರಿಗೆ.
7. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹ/ ಜಂಟಿ ನಿರ್ದೇಶಕ ವೃಂದದ ಅಧಿಕಾರಿಗಳಿಗೆ.
8. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿ.ಟಿ.ಇ)ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಸಹನಿರ್ದೇಶಕರಿಗೆ .

4. ಜಂಟಿ ನಿರ್ದೇಶಕರು(ಆಡಳಿತ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಹ ನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
6. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರಿಗೆ.
7. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹ / ಜಂಟಿ ನಿರ್ದೇಶಕ ವೃಂದದ ಅಧಿಕಾರಿಗಳಿಗೆ.
8. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿ.ಟಿ.ಇ.)ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಸಹನಿರ್ದೇಶಕರಿಗೆ.
9. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ.
10. ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ.
11. ಉಪನಿರ್ದೇಶಕರು, ಯೋಜನೆ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
12. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಇಲಾಖಾ ಅಂತರ್ಜಾಲ ತಾಣದಲ್ಲಿ ಅಳವಡಿಸಲು ತಿಳಿಸಿದೆ.
13. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಆಯಾ ಉಪನಿರ್ದೇಶಕರು (ಆಡಳಿತ) ರವರ ಮೂಲಕ).
14. ರಾಜ್ಯದ ಎಲ್ಲಾ ಶಿಕ್ಷಕರ ತರಬೇತಿ ಕೇಂದ್ರಗಳ (ಟಿ.ಟಿ.ಇ.) ಪ್ರಾಂಶುಪಾಲರಿಗೆ (ಆಯಾ ಡಯಟ್ ಪ್ರಾಂಶುಪಾಲರ ಮೂಲಕ).
15. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯಸ್ಥರಿಗೆ (ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ).
16. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ಗಳಿಗೆ (ಆಯಾ ಶಾಲಾ ಮುಖ್ಯ ಶಿಕ್ಷಕರ ಮೂಲಕ).
17. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಎಲ್ಲಾ ಶಿಕ್ಷಕರಿಗೆ ಮತ್ತು ಸಿಬ್ಬಂದಿಗಳಿಗೆ (ಆಯಾ ಶಾಲಾ ಮುಖ್ಯ ಶಿಕ್ಷಕರ ಮೂಲಕ).

**ಪ್ರತಿಯನ್ನು,**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ತಿಳಿಸಿದೆ.
3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
6. ಕಛೇರಿ ಪ್ರತಿ.